**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 02.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ**

3. ನನಗೆ ಕನ್ನಡ ಓದು ಬರೆಯಲು ಬರುತ್ತದೆ. ಆಂಗ್ಲ ಭಾಷ್ಷೆ ಅಷ್ಟು ಬರುವುದಿಲ್ಲ. ನಾನು ಸಂಸ್ಕೃತ ಭಾಷ್ಷೆಯಲ್ಲಿ ಶಾಸ್ತ್ರಾಧ್ಯಯನ ಮಾಡಿರುತ್ತೇನೆ. ನಾನು ಮುಂಬೈನಲ್ಲಿ ಶಾಸ್ತ್ರಾಧ್ಯಯನ ಮಾಡಿರುತ್ತೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ಪ್ರಮಾಣಪತ್ರವನ್ನು ಹಾಜರಪಡಿಸಿಲ್ಲ. ಅದೇ ರೀತಿ ಬೆಂಗಳೂರಿನಲ್ಲಿ ಶಾಸ್ತ್ರಾಧ್ಯಯನ ಮಾಡಿರುತ್ತೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ಪ್ರಮಾಣಪತ್ರವನ್ನು ಹಾಜರಪಡಿಸಿಲ್ಲ. ಹಳೇ ಹುಬ್ಬಳ್ಳಿಯಲ್ಲಿರುವ ಸತ್ಯಬೋಧ ಮಠದಲ್ಲಿ ನಾನು ಅರ್ಚಕನಾಗಿದ್ದೇನೆ. ಸದರಿ ಸತ್ಯಬೋಧ ಮಠದ ಟ್ರಸ್ಟ ಇರುವುದಿಲ್ಲ. ಸತ್ಯಬೋಧ ಮಠದವರು ಪ್ರತಿತಿಂಗಳು ನನಗೆ ಇಂತಿಷ್ಟು ಸಂಬಳ ಕೊಡುತ್ತಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಸ್ವಇಚ್ಛೆಯಿಂದ ನಾನು ಸದರಿ ಮಠದಲ್ಲಿ ಅರ್ಚಕನಾಗಿದ್ದೇನೆ ಎಂದರೆ ಸರಿ. ಸದರಿ ಮಠದಲ್ಲಿ ಅರ್ಚಕನಾಗಿ ಕೆಲಸ ಮಾಡುತ್ತಿದ್ದರೂ ಸಹ ನನಗೆ ಯಾವುದೇ ಸಂಬಳ ಬರುವುದಿಲ್ಲ ಎಂದರೆ ಸರಿ.

4. ದಿಃ05/01/2021 ರಂದು ಅಪಘಾತವಾಗಿರುತ್ತದೆ. ದ್ವಿಚಕ್ರ ವಾಹನ ಮತ್ತು ನಾನು ರಸ್ತೆಯ ಒಂದೇ ದಿಕ್ಕಿನಲ್ಲಿ ಹೊರಟಿದ್ದೇವು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಮುಂದೆ ಹೊರಟಿದ್ದೆ ಅವರು ಹಿಂದೆ ಬರುತ್ತಿದ್ದರು ಎಂದು ನುಡಿಯುತ್ತಾರೆ. ಕಾರವಾರ ರಸ್ತೆಯಲ್ಲಿರುವ ರಾಘವೇಂದ್ರ ಹೊಟೇಲ್ ಹತ್ತಿರ ಬೈಪಾಸ್ ರಸ್ತೆ ಇದೆ ಎಂದರೆ ಸರಿ. ರಾಘವೇಂದ್ರ ಹೊಟೇಲ್ ಹತ್ತಿರ ಹಂಪ್ಸಗಳನ್ನು ಅಳವಡಿಸಲಾಗಿದೆ ಎಂದರೆ ಸಾಕ್ಷಿ ನಾನು ಅಷ್ಟೋಂದು ಗಮನಿಸಿಲ್ಲ ಎಂದು ನುಡಿಯುತ್ತಾರೆ. ಲಾರಿ ನಂ.ಕೆಎ-30/1869 ಇದರ ಚಾಲಕನು ತನ್ನ ಲಾರಿಯನ್ನು ವೇಗವಾಗಿ ಚಾಲನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅವರು ವೇಗವಾಗಿ ಹಾಗೂ ನಿಷ್ಕಾಳಜಿತನದಿಂದ ವಾಹನ ಚಾಲನೆ ಮಾಡುತ್ತಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತವಾದ ನಂತರ ಚಿಕಿತ್ಸೆಗಾಗಿ ಕಿಮ್ಸ ಆಸ್ಪತ್ರೆಗೆ ಹೋಗಿದ್ದೇನು ಎಂದರೆ ಸರಿ. ನಂತರ ನಾನು ಸುಶ್ರೂತಾ ಆಸ್ಪತ್ರೆಗೆ ಹೋಗಿದ್ದೇನು ಅದಾದ ನಂತರ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಕಿಮ್ಸ ಆಸ್ಪತ್ರೆ ಹುಬ್ಬಳ್ಳಿಯವರು ನಿಮಗೆ ಇಲ್ಲಿ ಚಿಕಿತ್ಸೆ ನೀಡಲು ಆಗುವುದಿಲ್ಲ ಎಂದು ಪ್ರಮಾಣಪತ್ರ

ನೀಡಿರುತ್ತಾರಾ ಎಂದರೆ ಸಾಕ್ಷಿ ಅವರು ಮೌಖಿಕವಾಗಿ ಹೇಳಿದ್ದರು ಎಂದು ನುಡಿಯುತ್ತಾರೆ. ಲಾರಿ ನಂ.ಕೆಎ-30/1869 ಇದರ ಮಾಲೀಕರು ಯಾರು ಎಂದು ನನಗೆ ಮಾಹಿತಿ ಇಲ್ಲ. ನಾನು ಗುಣಮುಖನಾದ ಸದರಿ ಲಾರಿಯ ಮಾಲೀಕರು ಯಾರು ಎಂದು ತಿಳಿದುಕೊಳ್ಳಲಿಲ್ಲ.

5. ಅಪಘಾತದಲ್ಲಿ ನನಗೆ ಯಾವುದೇ ಒಳಪೆಟ್ಟು ಆಗಿಲ್ಲ ಎಂದರೆ ಸರಿಯಲ್ಲ. ಸುಶ್ರೂತಾ ಆಸ್ಪತ್ರೆ ಹುಬ್ಬಳ್ಳಿಯಲ್ಲಿ ನಾನು ಒಳರೋಗಿಯಾಗಿ ದಾಖಲಾಗಿರಲಿಲ್ಲ ಸಾಯಂಕಾಲ ಬಿಡುಗಡೆ ಮಾಡಿರುತ್ತಾರೆ. ಸುಶ್ರೂತಾ ಆಸ್ಪತ್ರೆ ಹುಬ್ಬಳ್ಳಿರವರು ನನಗೆ ಯಾವುದೇ ರೀತಿಯ ಚಿಕಿತ್ಸೆ ನೀಡಿಲ್ಲ ಎಂದರೆ ಸರಿ. ದಿಃ 05/01/2021 ರಂದು ರಾತ್ರಿ ನಾನು ಬೆಂಗಳೂರು ಸಾಕ್ರಾ ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ನಾನು 3 ತಿಂಗಳುಗಳವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ ಹಾಗೂ ಬಿಡುಗಡೆಯಾದ ನಂತರ ಸಹ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನನಗೆ ಯಾವುದೇ ರೀತಿಯ ಗಾಯ ಆಗಿಲ್ಲ ಎಂದು ಬೆಂಗಳೂರು ಸಾಕ್ರಾ ಆಸ್ಪತ್ರೆರವರು ವರದಿ ಕೊಟ್ಟು ಕಳುಹಿಸಿರುತ್ತಾರೆಂದರೆ ಸರಿಯಲ್ಲ. ನೀವು ಹಾಜರಪಡಿಸಿದ ವೈದ್ಯಕೀಯ ದಾಖಲೆಗಳಲ್ಲಿ ಬೆಂಗಳೂರು ಸಾಕ್ರಾ ಆಸ್ಪತ್ರೆ ಇವರು ನಿಮ್ಮ ಕೈಗೆ ರಾಡ್ ಹಾಕಿರುತ್ತಾರೆಂದು ನಮೂದಿಸಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಸಾದಾ ಸ್ವರೂಪದ ಗಾಯಗಳಾದ ಕಾರಣ ಕಿಮ್ಸನಲ್ಲಿ ಹೊರರೋಗಿಯಾಗಿ ಚಿಕಿತ್ಸೆ ನೀಡಿ ನನ್ನನ್ನು ಅದೇ ದಿನ ಮನೆಗೆ ಕಳುಹಿಸಿರುತ್ತಾರೆಂದರೆ ಸರಿಯಲ್ಲ.

6. ಲಾರಿ ನಂ.ಕೆಎ-30/1869 ಇದು ಅಪಘಾತವಾದ ದಿನ ವಿಮೆ ಹೊಂದಿತ್ತು ಎಂದರೆ ಇರಬಹುದು ಎಂದು ನುಡಿಯುತ್ತಾರೆ. ನಾನು ಕೇಳಿದ ಪರಿಹಾರ ನೀಡಲು ಪ್ರತಿವಾದಿ ನಂ.1 ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**